

ರಾಷ್ಟ್ರಪತಿ ಪ್ರಣಬ್ ಮುಖರ್ಜಿಯಿಂದ 'ಅತ್ಯುತ್ತಮ ಉದ್ಯಮಿ' ಪ್ರಶಸ್ತಿ ಪಡೆಯುತ್ತಿರುವ ನೀತಾ ಭಾಟಿಯಾ

ಎಂಬುದು ಭಾವೇಶ್ ಅವರ ಉದ್ದೇಶವಾಗಿತ್ತು. ಗಿರೀಶ್ ಭಾಟಿಯಾ ಅಹಮದ್‌ನಗರದಿಂದ ಬಹಳ ಗಟ್ಟಿಯಾದ ಬಂಕ್ ಬೆಡ್ಸ್ ಮಂಚಗಳನ್ನು ಅತಿ ಕಡಿಮೆ ಬೆಲೆಗೆ ತಯಾರಿಸಿ ಕಳುಹಿಸಿಕೊಟ್ಟರು. ಅವರ ಓರ್ವ ಮಿತ್ರ, ಹೆಸರಾಂತ ಹತ್ತಿಯ ವ್ಯಾಪಾರಿಗಳಾದ ಸಂಜಯ್ ಉದೇಶೀ ಅವರು ಈ ಎಲ್ಲ ಮಂಚಗಳಿಗೆ ಒಳ್ಳೆಯ ಹತ್ತಿಯ ಹಾಸಿಗೆಗಳನ್ನು ಮತ್ತು ದಿಂಬುಗಳನ್ನು ತಯಾರಿಸಿ ಕೊಟ್ಟರು. ಮತ್ತಷ್ಟು ಅಚ್ಚರಿಯಿತ್ತು. ರಾಮ್‌ನಿವಾಸ್ ಬಂಸಲ್ ಅವರು ಕ್ಯಾಂಟೀನ್ ಮತ್ತು ಸಮ್ಮೇಳನದ ಕೊಠಡಿಗಳಿಗೆ ಬೇಕಾದ 200 ಕುರ್ಚಿಗಳನ್ನು ಮತ್ತು 15 ಮೇಜುಗಳನ್ನು ಪುಣೆಯಿಂದ ಕಳುಹಿಸಿಕೊಟ್ಟರು.

ವರ್ಷಗಳಿಂದ ನೀರಿನ ಅಭಾವದಿಂದ ಕಷ್ಟಪಟ್ಟಿದ್ದರು. ಇದರ ಪರಿಹಾರದ ಮಾರ್ಗವಾಗಿ ಸೋನಾಲ್ ಅವರು ಮಳೆನೀರಿನ ಸಂಗ್ರಹದ ವ್ಯವಸ್ಥೆ ಮಾಡಿದರು. ಮಳೆಯ ನೀರಿನ ಹನಿ ಹನಿಯೂ ಜಮೆ ಆಗುವಂತೆ, 5 ಲಕ್ಷ ಲೀಟರಿನ ಆರ್.ಸಿ.ಸಿ.ಯ ಟ್ಯಾಂಕ್ ಅನ್ನು ನೆಲದ ಅಡಿಯಲ್ಲಿ ನಿರ್ಮಿಸಿದರು.

ಭಾವೇಶ್ ಅನೇಕ ಬಾರಿ ನಿರ್ಮಾಣವಾಗುತ್ತಿದ್ದ ಕಟ್ಟಡವನ್ನು ಮುಟ್ಟಿ ಮುಟ್ಟಿ ನೋಡುತ್ತಿದ್ದರು. ಅವರಿಗೆ ಇಷ್ಟು ಬೇಗ ತಮ್ಮ ಕನಸಿನ ಸೌಧ ಎದ್ದು ನಿಲ್ಲುತ್ತಿದೆ ಎಂದು ಅನೇಕ ಬಾರಿ ವಿಶ್ವಾಸವಾಗುತ್ತಿರಲಿಲ್ಲ. ಈ ಕಟ್ಟಡವನ್ನು ಅದ್ಯಾವುದೋ ಶಕ್ತಿ ನಿರ್ಮಾಣ ಮಾಡುತ್ತಿದೆ ಅನಿಸುತ್ತಿತ್ತು. ಅದು ಅವರ ಜೊತೆಯಲ್ಲಿ ಕೈಗೂಡಿಸಿದ ಜನರ ಶಕ್ತಿಯಾಗಿತ್ತು ಜನಶಕ್ತಿಯಾಗಿತ್ತು. ತಾವು ಇಷ್ಟು ದಿನ ಸ್ಪರ್ಶಿಸಿದ ಹೃದಯಗಳ ಸಮಗ್ರ ಶಕ್ತಿಯಾಗಿತ್ತು. ತಮ್ಮೊಳಗೆ ಎಂದೂ ಆರದಂತೆ ಬೆಳಗಿದ ಪ್ರೀತಿ ಕರುಣೆಯ ಪ್ರೇರಕ ಶಕ್ತಿ ಎಂದು ಬಹುಶಃ ವಿನಮ್ರ ವ್ಯಕ್ತಿತ್ವದ ಭಾವೇಶ್ ಅವರಿಗೆ ಅನಿಸಿರಲಿಲ್ಲವೇನೋ.

ಕಳೆದ ಒಂದು ವರ್ಷ ಊಟ ನಿದ್ರೆಯನ್ನೂ ಬಿಟ್ಟು ದುಡಿದಿದ್ದರು. ಆ ಎಲ್ಲ ಶ್ರಮ ಒಂದು ಸುಂದರ ಹಾಸ್ಟೆಲಿನ ರೂಪದಲ್ಲಿ ಇಂದು ಎದುರಿಗೆ ನಿಂತಿತ್ತು. ತಮ್ಮ ಪರಿಶ್ರಮ ಸಾರ್ಥಕವಾದ ಧನ್ಯತೆ. ಎದುರಿಸಿದ ಕಷ್ಟಗಳೆಲ್ಲವು ಅತಿ ಪುಟ್ಟವು ಅನಿಸತೊಡಗಿತ್ತು. ಮೇ 2014ರಲ್ಲಿ ಮೊದಲ ಅಗೆತ, ಕಟ್ಟಡಕ್ಕೆ ಆರಂಭವಾಗಿತ್ತು. ಇದೀಗ 26 ಏಪ್ರಿಲ್ 2015ರಂದು ಹಾಸ್ಟೆಲ್ ಉದ್ಘಾಟನೆಗಾಗಿ ಅಲಂಕೃತವಾಗಿ ನಿಂತಿತ್ತು.

ಆ ಸಂಭ್ರಮದ ಮುಂಜಾನೆ ಉದ್ಘಾಟನೆಯ ಸಡಗರ. ಮೋರೇಶ್ವರ ಗಾವ್‌ನಲ್ಲಿ ಇದ್ದ ಸುಮಾರು 70 ಕುಟುಂಬಗಳು ಇವರೊಡನೆ ಜೊತೆಯಾದರು. ಕೆಲವರು ಹೂವಿನಿಂದ, ಇನ್ನೂ ಕೆಲವರು ಮಾವು ಮತ್ತು ಅಶೋಕ ವೃಕ್ಷದ ಎಲೆಗಳಿಂದ, ಕಾಗದಗಳಿಂದ ತೋರಣಗಳನ್ನು ಕಟ್ಟಲು ಆರಂಭಿಸಿದ್ದರು. ಗಂಗಾರಾಮ್ ಅವರ ಅನುಮತಿ ಪಡೆದು ಬಗಲಿನ ಅವರ ನಿವೇಶನದಲ್ಲಿ ಒಂದು ದೊಡ್ಡ ಪೆಂಡಾಲ್ ಹಾಕಿಸಿದ್ದರು. ಭಾವೇಶ್ ಅವರ ಮಿತ್ರರಾದ ದವೇಜೀ ಅವರು ಕೇಟರಿಂಗ್ ಕೆಲಸದ ಮೇಲ್ವಿಚಾರಣೆ ಹೊತ್ತರು. ಅವರು ಬೆಳಗಿನ ಉಪಾಹಾರದಿಂದ ಹಿಡಿದು ರಾತ್ರಿಯ ಊಟದವರೆಗಿನ ಎಲ್ಲ ಜವಾಬ್ದಾರಿಯನ್ನು ಹೊತ್ತುಕೊಂಡರು. ಪುಣೆ ಮತ್ತು ಮುಂಬಯಿಯಿಂದಲೂ ಬಹಳಷ್ಟು ಸ್ನೇಹಿತರು ಮತ್ತು ಸಂಬಂಧಿಗಳು ಬಂದಿದ್ದರು. ಹಳ್ಳಿಯ ಎಲ್ಲ ಜನರಲ್ಲಿ ಬಹಳ ಉತ್ಸಾಹ ಮೂಡಿತ್ತು. ಯಾರೋ ತಮ್ಮ ಹೊಲದಿಂದ ಸ್ಟ್ರಾಬೆರಿ ತಂದಿದ್ದರೆ, ಮತ್ಯಾರೋ ಹಣ್ಣು ತರಕಾರಿ ನೀಡಿದ್ದರು. ಪ್ರತಿಯೊಬ್ಬರಿಗೂ ಈ ಸಂಭ್ರಮದಲ್ಲಿ ತಮ್ಮ ಯೋಗದಾನ ಇರಬೇಕೆಂಬ ಬಯಕೆ. ರಾಮ್‌ನಿವಾಸ್ ಬಂಸಲ್ ತಮ್ಮ ಪರಿವಾರ ಮತ್ತು ಸಂಬಂಧಿಗಳೊಡನೆ ಬಂದಿಳಿದರು. ಮುಖ್ಯ ಅತಿಥಿಯಾಗಿ ಪುಣೆಯ ಪೂರ್ವ ಇನ್ಸ್‌ಸ್ಪೆಕ್ಟರ್ ಜನರಲ್ ಅಶೋಕ್ ದೀವರೆ ಉಪಸ್ಥಿತರಿದ್ದರು. ಅವರೊಡನೆ ಪಟ್ಟಣದ ಡಿ.ವೈ.ಎಸ್.ಪೀ. ದೀಪಕ್ ಹೂಬರೆ ಮತ್ತು ಮಹಾಬಲೇಶ್ವರದ ಪೊಲಿಸ್ ಅಧಿಕಾರಿ ಪ್ರಕಾಶ್ ಸಾವಂತ್ ಅವರೂ ಬಂದಿದ್ದರು. ಸಂಗೀತದ ವಾದ್ಯಗಳನ್ನು ನುಡಿಸಲು ಬರುತ್ತಿದ್ದ ಅಂಧ ಮಿತ್ರರು ಪೆಂಡಾಲ್‌ನ ಒಂದು ಮೂಲೆಯಲ್ಲಿ ಉಪಸ್ಥಿತರಿದ್ದರು.

ಭಾವಸಾ ಅವರ ಪುತ್ರ ಅಭಯ್ ಬಾಗ್ಮಾರ್ ಮತ್ತು ರಾಮ್‌ನಿವಾಸ್ ಅವರ ಪುತ್ರ ಸಚಿನ್ ಬಂಸಲ್ ಉದ್ಘಾಟನೆಯ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡಿ, ಎಲ್ಲಾ ವ್ಯವಸ್ಥೆ ಸರಿ ಇರುವಂತೆ ನೋಡಿಕೊಂಡರು. ಪ್ರತಿಯೊಬ್ಬರೂ ಈ ಯಜ್ಞದಲ್ಲಿ ಭಾಗಿಯಾಗಲು ಬಯಸಿದ್ದರು. ಸುಮಾರು 3 ಗಂಟೆಗಳ ಕಾಲ ಉದ್ಘಾಟನೆಯ ಭರ್ಜರಿ ಕಾರ್ಯಕ್ರಮ ನಡೆಯಿತು. ಅದರ ನಂತರ ದೂರದೂರದಿಂದ ಬಂದ ಅನೇಕ ಮಹಾನುಭಾವರ ಉಪಸ್ಥಿತಿಯಲ್ಲಿ ಆ ಭವನವನ್ನು ಅಂಧ ಮಿತ್ರರಿಗೆ ಸಮರ್ಪಿಸಿದರು. ಈ ಹಾಸ್ಟೆಲಿನ ಮುಂದಿನ ಜವಾಬ್ದಾರಿಯನ್ನು ಕೆಲವು ವರ್ಷಗಳ ಹಿಂದೆ ಸ್ಥಾಪಿಸಿದ್ದ 'ಓಷೋನಿಕ್ ವಿಷನ್ ಫಾರ್ ದಿ ಬ್ಲೈಂಡ್ ವೆಲ್ಫೇರ್ ಸೊಸೈಟಿ' ಹೆಸರಿನ ಟ್ರಸ್ಟ್‌ಗೆ ವಹಿಸಿದರು. ಈ ಹಾಸ್ಟೆಲ್ ನಿರ್ಮಾಣಕ್ಕೆ ಸಹಭಾಗಿಗಳಾದ ಮಹಾನುಭಾವರನ್ನು ಟ್ರಸ್ಟಿಗಳಾಗಿ ನೇಮಕ ಮಾಡಿದರು. ಅಂಧ ತಂಡದ ಭವಿಷ್ಯ ಭದ್ರವಾಗಿ ಕಾಲೂರಿ ನಿಂತಿತ್ತು.

ಹಾಸ್ಟೆಲ್‌ನ ಉದ್ಘಾಟನಾ ಸಮಾರಂಭದ ನಂತರ, ದಿನಾಂಕ 27 ಏಪ್ರಿಲ್ 2015ರಂದು ನೀತಾ ಮೊದಲು ಮಾಡಿದ ಕೆಲಸ ಎಂದರೆ, ಭಾವೇಶ್ ಅವರನ್ನು ಗಾಡಿಯಲ್ಲಿ ಕೂರಿಸಿಕೊಂಡು ಒಂದು ಸಲೂನ್‌ಗೆ ಕರೆದೊಯ್ದು ಅವರ ಕೂದಲನ್ನು ಕತ್ತರಿಸಿದ್ದು. ಕಡೆಗೂ ನೀತಾ ಸಮಾಧಾನದ ಉಸಿರು ಬಿಟ್ಟಿದ್ದರು. ಇನ್ನಾದರೂ ತಮ್ಮ ಹೇರ್ ಬ್ಯಾಂಡ್‌ಗಳು ಮಾಯವಾಗುವುದಿಲ್ಲ ಎಂದು. ಹಾಸ್ಟೆಲ್ ನಿರ್ಮಾಣದ ಬಹು ದೊಡ್ಡ ಹೊರೆ ಈಗ ಇಳಿದಿತ್ತು. ಹೀಗಿದ್ದೂ ಅನಾಯಾಸವಾಗಿ ಭಾವೇಶ್ ಅವರ ಹಸ್ತ ತಲೆಯ ಮೇಲೆ ಸಾಗುತ್ತಿತ್ತು, ಆ ಉದ್ದನೆ ಕೂದಲನ್ನು ಹುಡುಕುತ್ತಿತ್ತು!

ಭಾವೇಶ್ ಅವರ ನಂಬಿಕೆಯನ್ನು ಈ ಹಾಸ್ಟೆಲ್ ಪ್ರಾಜೆಕ್ಟ್ ಗಟ್ಟಿ ಮಾಡಿತ್ತು. ಒಮ್ಮೆ ದೃಢ ಸಂಕಲ್ಪದಿಂದ ಮುಂದೆ ಹೆಜ್ಜೆ ಇಟ್ಟಾಗ, ಅದು ಸರ್ವರ ಒಲಿತಿಗೆ ಸ್ವಾರ್ಥದಾಚೆಗೆ ಇಟ್ಟ ಸಕಾರಾತ್ಮಕ ಹೆಜ್ಜೆ ಆದಾಗ, ಎಷ್ಟೇ ಅಡಚಣೆಗಳು ಹಾದಿಯಲ್ಲಿ ಹಾದು ಬಂದರೂ, ಅಷ್ಟೇ ಸಹಾಯಕ ಹಸ್ತಗಳು ಕೈ ಜೋಡಿಸುತ್ತವೆ. ಕನಸನ್ನು ಸಾಕಾರಗೊಳಿಸಿ ನಿಲ್ಲಿಸುತ್ತವೆ.

ಅವರ ಮತ್ತೊಂದು ನಂಬಿಕೆ ಇತ್ತು 'ನಾವು ದೇವರಲ್ಲಿ ನಮಗಾಗಿ ಏನಾದರೂ ಬೇಡಿದರೆ, ಅದು ಪೂರೈಸದೆ ಇರುವ ಸಾಧ್ಯತೆ ಇದೆ. ಆದರೆ ನಾವು ಸಮರ್ಪಣ ಭಾವದಿಂದ ನಿಸ್ವಾರ್ಥದಿಂದ ಇತರರ ಒಲಿತಿಗೆ ಬೇಡಿದಾಗ, ಆ ಬೇಡಿಕೆ ಖಂಡಿತಾ ಈಡೇರುತ್ತದೆ'. ಹಾಸ್ಟೆಲ್ ನಿರ್ಮಾಣ ಪೂರ್ಣವಾಗಿ ನಿಂತಿತ್ತು. 15 ಲಕ್ಷದ ಸಣ್ಣ ಪ್ರಾಜೆಕ್ಟ್ ಎಂದು ಹೊರಟದ್ದು ಒಂದೂವರೆ ಕೋಟಿಗೆ ಏರಿದ್ದರೂ ಇಂದು ಪೂರ್ಣಗೊಂಡಿತ್ತು. ಕಟ್ಟಡವಷ್ಟೇ ಶಕ್ತವಾಗಿ ನಿಂತಿರಲಿಲ್ಲ. ಅದರೊಡನೆ ಭಾವೇಶ್ ಮತ್ತು ಅವರ ತಂಡ ದೃಢವಾಗಿ ಹೆಜ್ಜೆಯೂರಿ ನಿಂತಿದ್ದರು. ಅವರ ಮನೋಬಲ ಹೆಚ್ಚಿತ್ತು. ಬದುಕು ಬದಲಿಸುವ ಕಾಯಕದ ಭಾವೇಶ್ ಅವರಿಗೆ ನೂರಾರು ಕೈಗಳು ಜೊತೆಯಾಗಿದ್ದವು.

* * *

(ಸಶೇಷ)